

## ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಲ್ಲಿ ದೊರೆಯುವ ಪ್ರಯೋಗಶಾಲಾ ಸೌಲಭ್ಯಗಳು

- ಹಿಮೊಗ್ಲೋಬಿನ್
- ಯುರಿನ್ ಪ್ರೆಗ್ನನ್ಸಿ ಟೆಸ್ಟ್
- ಯುರಿನ್ ಶುಗರ್/ಅಲ್ಬುಮಿನ್
- ಬ್ಲಡ್ ಗ್ಲುಕೋಸ್ – ಗ್ಲುಕೊಮೀಟರ್
- ಮಲೇರಿಯಾ ಸ್ಮಿಯರ್ – ಆರ್‌ಡಿಕೆ
- ಆರ್‌ಡಿಕೆ – ಡೆಂಗ್ಯೂ
- ಸಿಎ ಸರ್ವಿಕ್ಸ್‌ಗೆ ವಿಐಎ
- ಎಚ್‌ಐವಿ ರ್‍ಯಾಪಿಡ್ ಸೆರಾಲಜಿ
- ಉಪ್ಪಿನಲ್ಲಿರು ಆಯೋಡಿನ್ ಅಂಶ ಪರೀಕ್ಷೆ
- ಹೆಪಟೈಟಿಸ್– ಬಿ ಪತ್ತೆಗೆ ಎಚ್‌ಬಿಎಸ್‌ಎಜಿ ಪರೀಕ್ಷೆ
- ಫಿಲಾರಿಯಾಸಿಸ್ (ಎಂಡೆಮಿಕ್ ಏರಿಯಾ ಮಾತ್ರ) – ಎಫ್‌ಎಸ್‌ಟಿ
- ಕ್ಷಯ ಪತ್ತೆಗೆ ಸ್ಪುಟುಮ್ ಸಂಗ್ರಹಣೆ
- ಸಿಫಿಲಿಸ್‌ಗಾಗಿ ಆರ್‌ಡಿಕೆ ಟೆಸ್ಟ್ ಕಿಟ್
- ಎಚ್2ಎಸ್ ನೀರಿನ ಗುಣಮಟ್ಟ ಪರೀಕ್ಷೆ

ಆರೈಕೆಯನ್ನು ಪಡೆಯುತ್ತಾರೆ ಎಂದು ಖಚಿತಪಡಿಸಿಕೊಳ್ಳುವುದು.

ನವಜಾತ ಶಿಶುಗಳ ಹಾಗೂ ಮಕ್ಕಳ ಆರೋಗ್ಯ ವೃದ್ಧಿಗೆ ಈ ಕೇಂದ್ರ ನೆರವಾಗಲಿದೆ.

### ಕೌಶಲ ವೃದ್ಧಿಗೆ 6 ತಿಂಗಳ ಕೋರ್ಸ್

ಇಂದಿರಾಗಾಂಧಿ ಮುಕ್ತ ವಿಶ್ವ ವಿದ್ಯಾಲಯವು (ಇಗ್ನೋ) ಜಾರಿಗೊಳಿಸುತ್ತಿರುವ 6 ತಿಂಗಳ ಸಮುದಾಯ ಆರೋಗ್ಯ ಪ್ರಮಾಣ ಪತ್ರ ಕೋರ್ಸ್ ಅನ್ನು ಪ್ರಾಯೋಗಿಕವಾಗಿ 2016–17 ನೇ ಸಾಲಿನಿಂದ ಜಾರಿಗೊಳಿಸಲಾಗಿದೆ. 105 ಮಧ್ಯಮ ಹಂತದ ಆರೋಗ್ಯ ಸೇವೆಗಳ ಪೂರೈಕೆದಾರರನ್ನು (ಎಂ.ಎಲ್.ಎಚ್.ಪಿ) (ಪದವೀಧರ ಶುಶ್ರೂಷಕಿಯರನ್ನು) ಪಾರದರ್ಶಕ ಹಾಗೂ ವಿಕೇಂದ್ರೀಕೃತ ವಿಧಾನದಲ್ಲಿ ಜಿಲ್ಲಾ ಮಟ್ಟದಲ್ಲಿಯೇ ಗುತ್ತಿಗೆ ಆಧಾರದ ಮೇಲೆ ಆಯ್ಕೆ ಮಾಡಿ, 6 ತಿಂಗಳ ಸಮುದಾಯ ಆರೋಗ್ಯಕ್ಕೆ ಸಂಬಂಧಿಸಿದ ಕೌಶಲ್ಯ ಅಭಿವೃದ್ಧಿಗಾಗಿ ಬ್ರಿಜ್ ಕೋರ್ಸ್ ಅನ್ನು ಇಂದಿರಾಗಾಂಧಿ ಮುಕ್ತ ವಿಶ್ವ ವಿದ್ಯಾಲಯ ಹಾಗೂ ರಾಜ್ಯ ರಾಷ್ಟ್ರೀಯ ಆರೋಗ್ಯ ಮಿಷನ್ ಮೂಲಕ ಹಮ್ಮಿಕೊಳ್ಳಲಾಗಿತ್ತು.

ನಿಯೋಜಿತ 105 ಎಮ್.ಎಲ್.ಎಚ್.ಪಿ. ಗಳಲ್ಲಿ 102 ಅಭ್ಯರ್ಥಿಗಳು ಪ್ರಯೋಗಿಕ ಹಂತದಲ್ಲಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ, ರಾಯಚೂರು ಹಾಗೂ ಟಿ.ನರಸೀಪುರದಲ್ಲಿ ಫೆಬ್ರವರಿ 2018ರಿಂದ ಸೇವೆ ಸಲ್ಲಿಸುತ್ತಿದ್ದಾರೆ. ಮೊದಲ ಹಂತದಲ್ಲಿ (2017–18) 460 ಮಧ್ಯಮ ಹಂತದ ಆರೋಗ್ಯ ಸೇವೆಗಳ ಪೂರೈಕೆದಾರರನ್ನು (ಎಂ.ಎಲ್.ಎಚ್.ಪಿ) ವಿಕೇಂದ್ರೀಕೃತ ವಿಧಾನದಲ್ಲಿ ಗುತ್ತಿಗೆ ಆಧಾರದ ಮೇಲೆ ಆಯ್ಕೆಮಾಡಿ, 6 ತಿಂಗಳ ಸಮುದಾಯ ಅರೋಗ್ಯಕ್ಕೆ ಸಂಬಂಧಿಸಿದ ಕೌಶಲ ಅಭಿವೃದ್ಧಿಗಾಗಿ ಬ್ರಿಜ್ ಕೋರ್ಸ್ ಅನ್ನು ಇಂದಿರಾ ಗಾಂಧಿ ಮುಕ್ತ ವಿಶ್ವವಿದ್ಯಾಲಯ ಹಾಗೂ ರಾಜ್ಯ ಎನ್.ಎಚ್.ಎಂ. ಮೂಲಕ ಹಮ್ಮಿಕೊಂಡಿತ್ತು. ಈ ಅಭ್ಯರ್ಥಿಗಳಲ್ಲಿ 428 ಅಭ್ಯರ್ಥಿಗಳು ಉತ್ತೀರ್ಣರಾಗಿದ್ದು ಆಗಸ್ಟ್ 2018 ರಿಂದ ಆರೋಗ್ಯ ಸೇವೆ ಕೇಂದ್ರಗಳಲ್ಲಿ ಸೇವೆ ಒದಗಿಸುತ್ತಿದ್ದಾರೆ.

ದ್ವಿತೀಯ ಹಂತದಲ್ಲಿ ಈ ಅಭ್ಯರ್ಥಿಗಳಲ್ಲಿ 323 ಅಭ್ಯರ್ಥಿಗಳು ಉತ್ತೀರ್ಣರಾಗಿದ್ದು, ಆಗಸ್ಟ್ 2019 ರಿಂದ ಆರೋಗ್ಯ ಸೇವೆ ಕೇಂದ್ರಗಳಲ್ಲಿ ಸೇವೆ ಒದಗಿಸುತ್ತಿದ್ದಾರೆ. ತೃತೀಯ ಹಂತದಲ್ಲಿ (2019–20ನೇ ಸಾಲಿನಲ್ಲಿ) 577 ಅಭ್ಯರ್ಥಿಗಳ ಮಧ್ಯಮ ಹಂತದ ಆರೋಗ್ಯ ಸೇವೆಗಳ ಪೂರೈಕೆದಾರರನ್ನು (ಎಂ.ಎಲ್.ಎಚ್.ಪಿ) ವಿಕೇಂದ್ರೀಕೃತ ವಿಧಾನದಲ್ಲಿ ಗುತ್ತಿಗೆ ಆಧಾರದ ಮೇಲೆ ಆಯ್ಕೆಮಾಡಿ, 6 ತಿಂಗಳ ಸಮುದಾಯ ಅರೋಗ್ಯಕ್ಕೆ ಸಂಬಂಧಿಸಿದ ಕೌಶಲ್ಯ ಅಭಿವೃದ್ಧಿಗಾಗಿ ಬ್ರಿಜ್ ಕೋರ್ಸ್ ಪೂರ್ಣಗೊಳಿಸಿದ್ದಾರೆ.

2019–20ನೇ ಸಾಲಿನಲ್ಲಿ 313 ಅಭ್ಯರ್ಥಿಗಳು ಉತ್ತೀರ್ಣರಾಗಿದ್ದು, ಆಗಸ್ಟ್ 2020 ರಿಂದ ಆರೋಗ್ಯ ಸೇವೆ ಕೇಂದ್ರಗಳಲ್ಲಿ ಸೇವೆ ಒದಗಿಸುತ್ತಿದ್ದಾರೆ. ಮಧ್ಯಮ ಹಂತದ ಆರೋಗ್ಯ ಸೇವೆಗಳ ಪೂರೈಕೆದಾರರನ್ನು (ಎಂ.ಎಲ್.ಎಚ್.ಪಿ) ವಿಕೇಂದ್ರೀಕೃತ ವಿಧಾನದಲ್ಲಿ ಗುತ್ತಿಗೆ ಆಧಾರದ ಮೇಲೆ ಆಯ್ಕೆಮಾಡಿ, 6 ತಿಂಗಳ ಸಮುದಾಯ ಅರೋಗ್ಯಕ್ಕೆ ಸಂಬಂಧಿಸಿದ ಕೌಶಲ ಅಭಿವೃದ್ಧಿಗಾಗಿ ಬ್ರಿಜ್ ಕೋರ್ಸ್‌ಗೆ ಯೋಜಿಸಲಾಗಿದೆ. ಇಗ್ನೋ ವಿಶ್ವವಿದ್ಯಾಲಯವು ಈ ಎಂ.ಎಲ್.ಎಚ್.ಪಿ.ಗಳ ತರಬೇತಿಯನ್ನು ರಾಜ್ಯದಲ್ಲಿಯ 6 ಜಿಲ್ಲಾ ಆಸ್ಪತ್ರೆಗಳನ್ನು ಹಾಗೂ 7 ವೈದ್ಯಕೀಯ ಮಹಾವಿದ್ಯಾಲಯಗಳನ್ನು ಗುರುತಿಸಿ, ಮನ್ನಣೆ ನೀಡಿದೆ.